ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು) :

1) ಇಲ್ಲ. ಅರಣ್ಯ ಇಲಾಖೆಯ ಬಗರ್ ಹುಕುಂ ಭೂಮಿಯ ಸಕ್ರಮಣಕ್ಕೆ ಸರ್ಕಾರ ಸಸಮಿತಿ ರಚಿಸಲು ಉದ್ದೇಶಿಸಿಲ್ಲ.

2) ಇಲ್ಲ. ಆದರೆ, ದಿನಾಂಕ 27-4-78ರ ಪೂರ್ವದ ಅತಿಕ್ರಮಣ ಪ್ರಕರಣಗಳಿಗೆ ಸಂಬಂಧಪಟ್ಟು ಕೇಂದ್ರ ಸರ್ಕಾರ ಸಕ್ರಮಗೊಳಿಸಲು ಅನುಮತಿ ನೀಡಿದ್ದು, ರಾಜ್ಯ ಸರ್ಕಾರದಿಂದ ಸಕ್ರಮಕ್ಕೆ ಅದಷ್ಟು ಬೇಗನೆ ಕ್ರಮ ತೆಗೆದುಕೊಳ್ಳುವುದು.

ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ ಆರೋಗ್ಯ ಇಲಾಖೆಯಿಂದ ಹಳದಿ ಕಾರ್ಡ್ ಯೋಜನೆ

738 - ಶ್ರೀ ಡಿ. ಆರ್. ಪಾಟೀಲ್ (ಗದಗ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಅನುಕೂಲಕ್ಕಾಗಿ ಪ್ರಾರಂಭಿಸಿದ ಹಳದಿ ಕಾರ್ಡ್ ಯೋಜನೆಯ ಅನುಷ್ಠಾನ ಪ್ರಾರಂಭವಾಗಿದೆಯೇ?

ಆ) ಇಲ್ಲಿಯವರೆಗೆ ಈ ಯೋಜನೆಯಡಿಯಲ್ಲಿ ಆಳವಡಿಸಿದ ಕುಟುಂಬಗಳೆಷ್ಟು: ಕ್ಷೇತ್ರವಾರು ಮಾಹಿತಿ ನೀಡುವುದು?

ಇ) ಈ ಯೋಜನೆಯ ಅನುಷ್ಠಾನವನ್ನು ಸ್ಥಳೀಯ ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಡಾ॥ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಪ್ರಾರಂಭವಾಗಿದೆ.

ಆ) ಈ ಯೋಜನೆಯನ್ನು ಈ ಕೆಳಕಂಡ 5 ಜಿಲ್ಲೆಗಳಲ್ಲಿ ಹಂತವಾಗಿ ಪ್ರಾರಂಭಸಲಾಗಿದೆ.

1. ಬಿಜಾಪುರ 2. ರಾಯಚೂರು, 3. ಕೋಲಾರ,
4. ಹಾಸನ, 5. ಮೈಸೂರು ಜಿಲ್ಲೆಗಳು.

ತಾಲ್ಲೂಕುವಾರು ಮಾಹಿತಿ ಚಿಕಿತ್ಸೆ ನೀಡಿದ ವಿವರವನ್ನು ಪ್ರತ್ಯೇಕವಾದ ಅನುಬಂಧದಲ್ಲಿ ಲಗತ್ತಿಸಲಾಗಿದೆ.

ಇ) ಸ್ವಯಂ ಸೇವಾ ಸಂಸ್ಥೆಗಳನ್ನು ಈ ಕಾರ್ಯಕ್ರಮ ಅನುಷ್ಠಾನಗೊಳಿಸುವಲ್ಲಿ ಆಳವಡಿಸಿಲ್ಲ. ಆದರೆ, ಖಾಸಗಿ ಮಹಿಳಾ ವೈದ್ಯರು ತಾಲ್ಲೂಕು ಮಟ್ಟದಿಂದ ಪ್ರಾಥಮಿಕ ಆರೋಗ್ಯ ಕೇಂದ್ರ ಘಟಕಗಳಿಗೆ ಮಹಿಳೆಯರನ್ನು ಪರೀಕ್ಷೆ ನಡೆಸಲು ಸಂಭಾವನೆ ಮೇರೆಗೆ ಅವಕಾಶ ಮಾಡಲಾಗಿದೆ. 1997-98ರಲ್ಲಿ ಉಳಿದ 15 ಜಿಲ್ಲೆಗಳಿಗೆ ಈ ಕಾರ್ಯಕ್ರಮವನ್ನು ವಿಶ್ವ ಬ್ಯಾಂಕಿನ ಸಹಾಯದೊಂದಿಗೆ ವಿಸ್ತರಿಸಲಾಗುವುದು.

ANNEXURE

STATEMENT SHOWING THE NUMBER OF PERSONS SCREENED AND TREATED UNDER YELLOW CARD SCHEME

Sl.N.	Name of the District	Total SC/ST population screened	No. of villages	No of Taluks screened	No. of persons examined/screened	No.of patients	No. referred for Special treatment
1.	Kolar	2.21 Lakhs	359	7	4898	3152	12
2.	Mysore	3.15 -do-	79	2	7105	5519	105
3.	Bijapur	2.39 -do-	84	2	18158	7356	68
4.	Hassan	1.56 -do-	57	2	12258	6735	35
5.	Raichur	2.30 -do-	78	2	9569	6645	12
	Total		**656**	**15**	**51980**	**29407**	**232**